3. ಅರಣ್ಯ ಪ್ರದೇಶದ ಸುತ್ತಮುತ್ತಲಿನ ರೈತರನ್ನು ತೆರವುಗೊಳಿಸುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಆದ ಮೇಲೆ ತೆಗೆದುಕೊಳ್ಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ರೇವಣ್ಣರವರೇ ಒಂದು ನಿಮಿಷ.

ಅಧ್ಯಕ್ಷರು: ಅವರು ಅರ್ಜಿ ಕೊಟ್ಟಿದ್ದಾರೆ. ಇವತ್ತು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ : ಮೊನ್ನೆ ರೈತರಿಗೆ ಖಾಲಿ ಮಾಡಿಸಬಾರದು ಎಂದು ಹೇಳಿದ್ದಿರಿ. ಇವತ್ತು ಹೋಗಿ ಅಲ್ಲಿ ಖಾಲಿ ಮಾಡಿಸಿದ್ದಾರೆ.

ಅಧ್ಯಕ್ಷರು : ಈಗ ಅದಕ್ಕೇ ಬರುತ್ತೇವೆ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಮೊನ್ನೆ ಸದನದಲ್ಲಿ ಚರ್ಚೆಯಾಗಿದೆ, ಮಂತ್ರಿಗಳೂ ಕೂಡ ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ರೇವಣ್ಣರವರು ನಿಂತಿದ್ದಾರೆ.

ಶ್ರೀ ಡಿ.ಎನ್.ಜೀವರಾಜ್ : ನಾನು ಹೇಳಿದರೆ ಮಾನ್ಯ ರೇವಣ್ಣರವರು ಈಲ್ಡ್ ಆಗುತ್ತಾರೆ.

ಅಧ್ಯಕ್ಷರು : ಮಾನ್ಯ ರೇವಣ್ಣರವರೆ ದಯವಿಟ್ಟು ಒಂದು ನಿಮಿಷ. ಆಯಿತು, ಹೇಳಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂದಾವರದ ನಾರಾಯಣಗೌಡರು ಎಂಬುವವರ ಜಾಗದಲ್ಲಿ ಮನೆ ಕಟ್ಟಿ ಆಗಿತ್ತು. ನಮ್ಮ ಮಾನ್ಯ ಅರಣ್ಯ ಸಚಿವರು ಬಹಳ ಸ್ಪಷ್ಟವಾಗಿ ಅದನ್ನು ಓದುತ್ತಾ ನಾವು ಮೀಟಿಂಗ್ ಮಾಡುತ್ತೇವೆ, ಮೀಟಿಂಗ್ ಮಾಡುವವರೆಗೆ ಇದನ್ನು ಕೀಳುವುದಿಲ್ಲ, ತಾವೂ ಇದ್ದಂತೆ ಮೀಟಿಂಗ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ, ಸದನದಲ್ಲಿ ಭರವಸೆ ಕೊಟ್ಟು ಇವತ್ತು 300 ಜನ ಹೋಗಿ ನಾರಾಯಣಗೌಡರ ಜಾಗದಲ್ಲಿ ಖಿಲ್ಲಾ ಮಾಡುತ್ತಿದ್ದಾರೆ. 10 ಎಕರೆ ಒಳಗಡೆ ಇರುವವರ ಜಾಗವನ್ನು ಖಾಲಿ ಮಾಡಿಸುವುದಿಲ್ಲವೆಂದು ಹೇಳಿದವರು, ಈಗ N.R. ಪುರದ ಕೊರಲಗುಪ್ಪದಲ್ಲಿ ರಾಜು ಎಂಬ ಬಹಳ ಸಣ್ಣ ರೈತನ ಜಾಗವನ್ನು ಖಿಲ್ಲಾ ಮಾಡುವುದಕ್ಕೆ ಹೊರಟಿದ್ದಾರೆ. ಸದನದಲ್ಲಿ ತಮ್ಮ ಮುಂದೆ ಆಶ್ವಾಸನೆ ಕೊಟ್ಟು ಇವತ್ತು ಈ ರೀತಿ ಖಿಲ್ಲಾ ಮಾಡುವುದಕ್ಕೆ ಹೋಗಿದ್ದಾರೆಂದರೆ ಬಹುಶಃ ಇಲ್ಲಿ ಹಕ್ಕು ಚ್ಯುತಿ ಆಗಬಹುದು ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ ನನ್ನ ವಿನಂತಿ ಏನೆಂದರೆ ನಾನು ಮಾನ್ಯ ಮಂತ್ರಿಗಳ ಜೊತೆ ಮಾತನಾಡಿ, ಅದಕ್ಕೆ ಅವರು ಏನು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಾರೆಂದು ಅವರ ಜೊತೆ ಮಾತನಾಡಿ ಹೇಳುತ್ತೇನೆ.

ಶ್ರೀ ಡಿ.ಎನ್.ಜೀವರಾಜ್ : ಗಿಡಗಳನ್ನು ಕಡಿಯುತ್ತಿದ್ದಾರೆ, ಕಡಿಯುವುದನ್ನು ನಿಲ್ಲಿಸುವಂತೆ ಆದೇಶ ಮಾಡಿ ಎಂದು ಹೇಳಿ.

ಅಧ್ಯಕ್ಷರು : ನಾನು ಬಾಯಿ ಬಿಡುವುದಕ್ಕೆ ಹೋಗುವುದಿಲ್ಲ. ಇದು ನನ್ನ ಜವಾಬ್ದಾರಿ ನಾನು ಮಾನ್ಯ ಸಚಿವರ ಜೊತೆ ಮಾತನಾಡಿ ಸೂಕ್ತ ಪರಿಹಾರ ಕಂಡುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ತಾವೂ ಸರ್ಕಾರದಲ್ಲಿದ್ದವರು. ಈಗ ಪ್ರಸ್ತಾಪ ಮಾಡಿದ್ದೀರಿ, ಪ್ರಸ್ತಾಪ ಮಾಡಿದ ತಕ್ಷಣ ಏಕಾಏಕಿ ತೀರ್ಮಾನ ಮಾಡುವುದು ಕಷ್ಟವಾಗುತ್ತದೆ. ಗಿಡಗಳನ್ನು ಕಡಿಯುತ್ತಿದ್ದಾರೆಂದು ಮಾನ್ಯ ಸಭಾಧ್ಯಕ್ಷರ ಕೊಠಡಿಯಲ್ಲಿ ಮಾತನಾಡುವಾಗ ಕೂಡ ಪ್ರಸ್ತಾಪ ಮಾಡಿದ್ದಾರೆ, ವಿಚಾರ ಗಂಭೀರವಾಗಿದೆ. ಮಂತ್ರಿಗಳ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಇವತ್ತೇ ಮಾಡೋಣ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ, ಮೊನ್ನೆ ಅರಣ್ಯ ಸಚಿವರೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಬಂದಿದ್ದಾರೆ.

ಅಧ್ಯಕ್ಷರು : ಅದನ್ನು ನಾನು ಒಪ್ಪುತ್ತೇನೆ. ಅವರ ಜೊತೆ ಮಾತನಾಡುತ್ತೇನೆ. ನಿಮ್ಮ ಬಗ್ಗೆ ನಾನು ಹೇಳಲಾ?

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಸಚಿವರು ಮೀಟಿಂಗ್ ಆಗುವವರೆಗೆ ಮರಗಳನ್ನು ಕಡಿಯುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಇವು ಕೇವಲ ನೆನ್ನೆ ಮೊನ್ನೆಯ ವಿಚಾರಗಳಲ್ಲ. ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನ ಆಗಿರತಕ್ಕಂಥದ್ದು, ಹೈಕೋರ್ಟ್‌ನಲ್ಲಿ ಆಗಿರತಕ್ಕಂಥದ್ದು. ನಾವು ಏಕಾಏಕಿ ಉತ್ತರ ಕೊಡಬೇಕೆಂದರೆ ಹೇಗೆ? ತಾವು ಏನು ವಿಚಾರವನ್ನು ಪ್ರಸ್ತಾಪ ಮಾಡದ್ದೀರಿ, ಅದನ್ನು ನಾನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತಂದು ಉತ್ತರವನ್ನು ಕೊಡಿಸತಕ್ಕಂತಹ ಕೆಲಸ ಮಾಡುತ್ತೇನೆ. ಪರಿಹಾರ ಕಂಡು ಹಿಡಿಯುವುದರ ಬಗ್ಗೆ ಕೂಡ ಚಿಂತನೆ ಮಾಡುತ್ತೇನೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಮರಗಳನ್ನು ಕಡಿಯುತ್ತಿದ್ದಾರೆ. ಕಡಿದಾದ ಮೇಲೆ ಉತ್ತರ ತೆಗೆದುಕೊಂಡು ಏನು ಮಾಡುತ್ತೀರಿ?

ಅಧ್ಯಕ್ಷರು : ಒಂದು ಮಾತು ಹೇಳಲಾ? DFO ರವರ ಜೊತೆ ನಾನೇ ಮಾತನಾಡಿದೆ. ಪಾರಂಪರಿಕ ಅರಣ್ಯ ಹಕ್ಕು ಕಾನೂನಿನ ಪ್ರಕಾರ ಅವರು ಅರ್ಜಿ ಕೊಟ್ಟಿದ್ದರೆ ನಾನು ಪರಿಶೀಲನೆ ಮಾಡುತ್ತೇನೆ, ಹೋಗುವುದಿಲ್ಲವೆಂದು ಹೇಳಿದರು. ಅಲ್ಲಿ ಅವರು ಅರ್ಜಿ ಕೊಟ್ಟಿಲ್ಲ. ನನಗೆ ಇವೆಲ್ಲಾ ಗೊತ್ತಿವೆ ಮತ್ತೆ ಮುಂದೆ ಹೇಳುವುದಕ್ಕೆ ಹೋಗಬೇಡಿ. ನಾನು ಮಂತ್ರಿಗಳ ಜೊತೆ ಮಾತನಾಡಿದ್ದೇನೆ, ಅವರೂ ಭರವಸೆ ಕೊಟ್ಟಿದ್ದಾರೆ. ರಕ್ಷಣೆ ಕೊಡುವ ಕೆಲಸವನ್ನು ಎಲ್ಲರೂ ಸೇರಿ ಮಾಡೋಣ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಭಾಧ್ಯಕ್ಷರ ಪೀಠದಿಂದ ಕೊಟ್ಟಿರುವಂತಹ ಸಲಹೆ ಏನಿದೆ ಅದನ್ನು ಅವಶ್ಯಕವಾಗಿ ಅನುಸರಿಸುವ ಕೆಲಸ ಮಾಡುತ್ತೇವೆ. ಇವತ್ತೂ ಕೂಡ ತಡವಾಗಿಲ್ಲ. ಇಲ್ಲಿ ನಿಯಮಗಳು ಕೂಡ ಇವೆ. ನಿಯಮ ಸಡಿಲಿಸುವುದು ಕಷ್ಟವಾಗುತ್ತದೆ. ಅದಕ್ಕೆ ಪರಿಹಾರ ಕಂಡುಹಿಡಿಯಬೇಕಾದರೆ ದಾರಿಯೂ ಬೇಕಾಗುತ್ತದೆ. ಪರಿಹಾರ ಕಂಡುಹಿಡಿಯುವುದಕ್ಕೆ ದಾರಿ ಇದೆ ಎಂದು ಅವರು ಹೇಳುತ್ತಿರುವಾಗ ನಾವು ಆ ದಿಕ್ಕಿನಲ್ಲಿ ಏಕೆ ಹೆಜ್ಜೆ ಹಾಕಬಾರದು?

ಶ್ರೀ ಡಿ.ಎನ್.ಜೀವರಾಜ್ : 300 ಜನ ಹೋಗಿ ಮರಗಳನ್ನು ಕಡಿದು ತೋಟ ಕ್ಲಿಯರ್ ಮಾಡುತ್ತಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ : ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು : ಸುಮ್ಮನೆ ಕೆಲಸಕ್ಕೆ ಬಾರದ ಮಾತನಾಡಬೇಡಿ. ದಯವಿಟ್ಟು ಹೇಳುವುದನ್ನು ಕೇಳಿ. ನಾನು ಅವರ ಹತ್ತಿರ ಮಾತನಾಡಿ ರಕ್ಷಣೆ ಕೊಡುವ ಕೆಲಸ ಮಾಡುತ್ತೇನೆ. ಸುಮ್ಮನೆ ಅದನ್ನೇ ಪ್ರಸ್ತಾಪ ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಯಾರ್ಯಾರು ಅರಣ್ಯ ಜಮೀನಿನಲ್ಲಿ ಅತಿಕ್ರಮಣ ಮಾಡಿಕೊಂಡು ಪಾರಂಪರಿಕವಾಗಿ 50–60 ವರ್ಷಗಳಿಂದ ಜೀವನ ಮಾಡುತ್ತಿದ್ದಾರೆ ಈಗ ಅವರಿಗೆ ನೋಟೀಸ್

ಕೊಡುವುದರ ಬಗ್ಗೆ ಸದನದಲ್ಲಿ ಚರ್ಚೆಯಾಗಿ ಕೋಟೀಸ್ ಕೊಡುವುದು ನಿಲ್ಲಿಸುತ್ತೇವೆಂದು ಹೇಳಿದರು. ಈಗ ಅಲ್ಲಿ ಕ್ಲಿಯರ್ ಮಾಡುತ್ತಿದ್ದಾರೆ. ಅಲ್ಲಿಯ ಕಾಫಿ ಗಿಡ, ಅಡಿಕೆ ಗಿಡ ಹಾಗೂ ಹಾಕಿರುವಂತಹ ಬೇರೆ ಬೇರೆ ಗಿಡಗಳನ್ನೆಲ್ಲಾ JCB ತೆಗೆದುಕೊಂಡು 300 ಜನ ಸಿಬ್ಬಂದಿಗಳು ಹೋಗಿ ಕಟ್ ಮಾಡಿ ತೆಗೆಯುತ್ತಿದ್ದಾರೆ. ಅರ್ಧದಷ್ಟು ತೆಗೆದು ಆಗಿದೆ. ತಕ್ಷಣ ಮಾನವೀಯತೆ ದೃಷ್ಟಿಯಿಂದ ತಾವು ಅಧಿಕಾರಿಗಳಿಗೆ ಸ್ಪಷ್ಟವಾದ ಸಂದೇಶ ಕೊಟ್ಟು ಅದನ್ನು ನಿಲ್ಲಿಸುವಂತೆ ಸೂಚನೆ ಕೊಡಬೇಕು. ಮಾನವೀಯತೆ ದೊಡ್ಡದೋ, ಅಥವಾ ಇದು ಯಾವುದೋ ಕಾನೂನು ಹೇಳಿಕೊಂಡು ಮಾಡುವುದೋ? ಇವತ್ತು ಮಾಡಿದ್ದು ಇದ್ದರೆ ಕ್ರಮ ತೆಗೆದುಕೊಳ್ಳಿ. 50–100 ವರ್ಷಗಳಿಂದ ಮಾಡಿದ್ದಾರೆ. ಅವರ ಜೀವನ ಅದರ ಮೇಲಿಯೇ ಅವಲಂಬಿತವಾಗಿದೆ. ಎಲ್ಲಾ ಜಿಲ್ಲೆಗಳಲ್ಲಿ ಇದೆ. ಮಲೆನಾಡಿನ ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ ಇದು ಇದೆ. ನಮ್ಮ ಜಿಲ್ಲೆಯಲ್ಲಿ 40,000 ಬಡ ಕುಟುಂಬದವರು ಈ ರೀತಿ ಅತಿಕ್ರಮಣ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಈ ರೀತಿ ಒಂದು ಕಡೆ ಆಗಿರುವ ಬಗ್ಗೆ ಸೂಚನೆ ಕೊಡಬೇಕು.

ಅಧ್ಯಕ್ಷರು : ಸಿಗದೇ ಹೋದರೆ ನಾವು ಮೆರವಣಿಗೆ ಮಾಡುತ್ತೇವೆ. ನೀವೇನೂ ಬರಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ : ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು, ಮಾಡುತ್ತೇವೆ. ದಯವಿಟ್ಟು.

ಶ್ರೀ ಕೆ.ಜಿ.ಬೋಪಯ್ಯ : ಮರಗಳನ್ನು ಕಡಿದು ಹಾಕುತ್ತಿದ್ದಾರೆ. ಅದನ್ನೂ ನಿಲ್ಲಿಸುವುದಿಲ್ಲವೆಂದರೆ ಹೇಗೆ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಜಿ ಸಭಾಧ್ಯಕ್ಷರು ಅವರು ಅಧ್ಯಕ್ಷರ ಪೀಠದಲ್ಲಿ ಕೂತಾಗ ನಾವು ಯಾವಾಗಲಾದರೂ ಅವಕಾಶ ಮಾಡಿ ಕೊಟ್ಟಿದ್ದಿರಾ? ಅವಕಾಶ ಮಾಡಿ ಕೊಟ್ಟಿದ್ದು ಒಂದಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಮನೆ ಖಾಲಿ ಮಾಡಿಸುವುದಾಗಲಿ ಕಾಫಿ ತೋಟ ಕಡಿಯುವುದಾಗಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಆಗಲಿಲ್ಲ.

ಅದನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ನಾನು ಬೇರೆ ರೀತಿ ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಒಬ್ಬ ಮಂತ್ರಿಗಳು ಈ ರೀತಿ ಮಾತನಾಡಿದರೆ ನಾನು ಬೇರೆ ದಾಟಿಯಲ್ಲಿ ಮಾತನಾಡಬೇಕಾಗುತ್ತದೆ. ಮನೆ ಹಾಳು ಮಾಡಿಸುವ ಕೆಲಸ ಹಿಂದಿನ ಸರ್ಕಾರದಲ್ಲಿ ಆಗಿಲ್ಲ. ಮನೆ ಕಾಫಿ ಗಿಡ ಎಲ್ಲಾ ಕಡಿದು ನಾಶ ಮಾಡುತ್ತಿದ್ದಾರೆ. ಅದಕ್ಕೇ ಕೇಳುತ್ತಿದ್ದೇವೆ. ನಿಮ್ಮ ಹಾಗೆ ಯಾರೂ ಮಾಡಲಿಲ್ಲ. ಜನರಿಗೆ ಅನ್ಯಾಯವಾಗಿದೆ. ಮಾತನಾಡಿದ್ದೇವೆ. ಈ ತರಹ ಬಾಯಿ ಮುಚ್ಚಿಸುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಆ ವಿಚಾರದಲ್ಲಿ ಎಲ್ಲರೂ ಒಂದೇ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಫಿ ಗಿಡ ತೆಗೆಯತಕ್ಕಂಥದ್ದರ ಬಗ್ಗೆ ನೀವೇನು ಗಮನ ಸೆಳೆದಿದ್ದೀರಿ, ಅದರ ಬಗ್ಗೆ ಸರ್ಕಾರಕ್ಕೂ ಅರಿವು ಇದೆ. ಅದು ಸರ್ಕಾರದ ಗಮನದಲ್ಲಿದೆ. ಆದರೆ ಒಂದು ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ಆಗುತ್ತಿರತಕ್ಕಂತಹ ಹಿನ್ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ವಿಚಾರವನ್ನು ಚರ್ಚೆ ಮಾಡಬೇಕಾದಾಗ it is a law of the land ಅದು ತಮಗೂ ಕೂಡ ಗೊತ್ತಿರುವಂಥದ್ದು. ಯಾವುದೋ ಕೋರ್ಟ್ ಎಂದು ಕಾಗೇರಿಯವರು ಹೇಳಿದರು. ಯಾವುದೋ ಕೋರ್ಟ್ ಅಲ್ಲ. Highest court of this country has given directions. on the directions of that, officers are acting. ದಯವಿಟ್ಟು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : Specific direction ಚಿಕ್ಕಮಗಳೂರು ಅಥವಾ ನಾರಾಯಣಗೌಡರ ಜಮೀನು ಖಾಲಿ ಮಾಡಿಸಿ ಎಂದು Supreme Court ನಿಂದ ಆರ್ಡರ್ ಆಗಿಲ್ಲ. ಎಲ್ಲೆಲ್ಲಿ forest land ಇದೆ ಎಲ್ಲವನ್ನೂ ಖಾಲಿ ಮಾಡಿಸಿ ಎನ್ನುವಂಥದ್ದು ಇದೆ. ಲಕ್ಷಾಂತರ ಕುಟುಂಬಗಳು ಇವೆ. ಅರಣ್ಯ ಹಕ್ಕು ಕಾಯಿದೆ ಏನಿದೆ? ಪಾರಂಪರಿಕ Forest Dwellers Actನಲ್ಲಿ ಅವರು ಅರ್ಜಿ ಹಾಕದೇ ತಪ್ಪು ಮಾಡಿದ್ದಾರೆ. ಏಕೆ ಅರ್ಜಿ ಕೊಡಲಿಲ್ಲವೆಂದರೆ, ಹಿಂದೆ ಅದೆಲ್ಲಾ ರೆವಿನ್ಯೂ ಲ್ಯಾಂಡ್, ಸ್ವಲ್ಪ ತಾತ್ಕಾಲಿಕ ಹಕ್ಕು ಪತ್ರ ಕೊಟ್ಟಿದ್ದಾರೆ. ಈ

dispute ಇದ್ದುದರಿಂದ ಕೆಲವರು ಕೊಡಲಿಲ್ಲ. ಹಾಗಾಗಿ ಅದು ಉಳಿದುಕೊಂಡಿದೆಯೇ ಹೊರತು, ಉದ್ದೇಶಪೂರ್ವಕವಾಗಿ ignorance of law ಆ ತರಹ ಅರ್ಜಿ ಕೊಡದೇ ಏನಿಲ್ಲ. ಇನ್ನೂ ಕಾಲ ಮಿಂಚಿಲ್ಲ ಅರ್ಜಿ ಹಾಕಲಿಕ್ಕೆ ಅವಕಾಶ ಇದೆ. ಅರ್ಜಿ ಹಾಕಿಕೊಳ್ಳಲಿ. ಅಲ್ಲಿಯವರೆಗೆ ಮಾನವೀಯತೆ ದೃಷ್ಟಿಯಿಂದ ತಡೆ ಮಾಡಿ, ಆ ಮೇಲೆ ಸುಪ್ರೀಂಕೋರ್ಟಿಗೆ ಒಂದು affidavit ಹಾಕಿ. They have all filed the application under the Forest Dwellers Act. It is still pending. ಮೂರು ನಾಲ್ಕು ಜನರದ್ದು ಈಗ ಖಾಲಿ ಆಗಿ ಹೋಯಿತು. ಇಷ್ಟನ್ನು ಅರ್ಥ ಮಾಡಿಕೊಳ್ಳದೆ ನೀವು ಏಕಾಏಕಿ ಸುಪ್ರೀಂ ಕೋರ್ಟ್ ಎಂದು ಹೇಳಿದರೆ ಹೇಗೆ?

ಶ್ರೀ ಎನ್.ಚಲುವರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಾನೂನು ಎಲ್ಲರಿಗೂಒಂದೇ. ಸುಪ್ರೀಂ ಕೋರ್ಟ್‌ನ ಆದೇಶದಂತೆ ನಾವು ಇಲ್ಲಿ ಬದಲಾವಣೆ ಮಾಡಿ ಅಥವಾ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳುವುದಕ್ಕಾಗುವುದಿಲ್ಲ. ತಾತ್ಕಾಲಿಕವಾಗಿ off the record ನಾಲ್ಕು ದಿವಸ wait ಮಾಡಿ ಎಂದು ಅಧಿಕಾರಿಗಳಿಗೆ ಹೇಳಿ, ಆ ಮೇಲೆ examine ಮಾಡಿ help ಮಾಡುವುದಕ್ಕೆ ಆದರೆ ಮಾಡಿ, ಆಗುವುದೇ ಇಲ್ಲದೆಂದರೆ, ನೋಡಪ್ಪ I am sorry ಇದು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ. off the record ಹೇಳುವುದಕ್ಕೇನು?

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಈ ಸದನದಲ್ಲಿ off the record ಎನ್ನುವುದು ಇಲ್ಲ. ಇಲ್ಲಿ ನೀವು ಮಾತನಾಡುವುದು ಮತ್ತು ನಾವು ಮಾತನಾಡುವುದೆಲ್ಲವೂ record ಆಗುತ್ತದೆ.

ಶ್ರೀ ಎನ್.ಚಲುವನಾರಾಯಣಸ್ವಾಮಿ :– ಮೂರು ದಿವಸಗಳಿಂದ ಚರ್ಚೆಯಾಗುತ್ತಿದೆ. ಅಧಿಕಾರಿಗಳಿಗೆ ನೀವು ಒಂದು ಕಿವಿಮಾತು ಹೇಳಿ. ಎರಡು ದಿವಸಗಳ ಕಾಲ ಕಾದು ತದನಂತರದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದಲ್ಲ?

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಗೆ ಅವರನ್ನೂ ಕರೆಸಿ, ಮಂತ್ರಿಗಳನ್ನೂ ಕರೆಸಿ, ಕುಳಿತು ಇದರ ಬಗ್ಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ರೂಲ್ 69 ರಡಿಯಲ್ಲಿ ಮಂಗಳವಾರ ಚರ್ಚೆಗೆ ಅವಕಾಶ ಕೊಡಲು ಒಪ್ಪಿ ಕೊಂಡಾಗಿದೆ. ದಯವಿಟ್ಟು ಈ ಬಗ್ಗೆ ಈಗಲೇ ಮತ್ತೆ ಮಾತನಾಡದೇ ಎಲ್ಲರೂ ಕುಳಿತುಕೊಳ್ಳಿ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:– ಹಾಸನ ಮತ್ತು ಶಿವಮೊಗ್ಗದಲ್ಲಿರುವ ಪಶು ವೈದ್ಯಕೀಯ ಕಾಲೇಜುಗಳ ಮಾನ್ಯತೆಯನ್ನು ರದ್ದು ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಪಶುಸಂಗೋಪನಾ ಇಲಾಖಾ ಸಚಿವರು ಇಲ್ಲಿಯೇ ಇದ್ದಾರೆ. ಹಾಸನ ಮತ್ತು ಶಿವಮೊಗ್ಗದಲ್ಲಿರುವ ಪಶುವೈದ್ಯಕೀಯ ಕಾಲೇಜಿನ ಮಾನ್ಯತೆ ರದ್ದು ಮಾಡುವುದಕ್ಕೆ ಈಗಾಗಲೇ Veterinary Council of India ರದ್ದು ಮಾಡಿರುವುದರ ಬಗ್ಗೆ ಹೇಳಿದ್ದಾರೆ. ದಿನಾಂಕ 08–04–2013 ರಲ್ಲಿ ಶಿವಮೊಗ್ಗ ಮತ್ತು ಹಾಸನದ ಎರಡೂ ಕಾಲೇಜಿನ ಮಾನ್ಯತೆ ರದ್ದು ಮಾಡಬೇಕು, ಈ ವರ್ಷದಿಂದ ಅಡ್ಮಿಶನ್ ಮಾಡಬಾರದೆಂದು ಹೇಳಿರುವ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎರಡನೆಯದಾಗಿ, 391 ಪಶು ವೈದ್ಯಕೀಯ ವೈದ್ಯರ ನೇಮಕಾತಿ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿದೆ. ಇದರಲ್ಲಿ ಹಾಸನ ಮತ್ತು ಶಿವಮೊಗ್ಗ ಕಾಲೇಜಿನ ವಿದ್ಯಾರ್ಥಿಗಳ ರಿಸಲ್ಟ್ ಕೂಡ ಬಂದಿದ್ದು ಅವರುಗಳು ಹಾಕಿರುವ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದಾರೆ. ಆ ಕಾಲೇಜ್‌ಗಳಲ್ಲಿ ಪಾಸ್ ಆಗಿರುವಂಥ ವಿದ್ಯಾರ್ಥಿಗಳು ಹಾಕಿರುವ ಅರ್ಜಿಗಳನ್ನು ತಿರಸ್ಕಾರ ಮಾಡಿದ್ದಾರೆ. ಇವತ್ತು ಬೋಧಕರುಗಳು ಅಲ್ಲಿ ಇಲ್ಲ. ಸುಮಾರು 96 ಜನ ಬೋಧಕರುಗಳು, ಬೋಧಕೇತರ ಸಿಬ್ಬಂದಿಗಳು 196 ಜನ, ಹೀಗೆ ಒಟ್ಟು 250 ಜನ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗಳಿಲ್ಲವೆಂದು ಮತ್ತು ಕಟ್ಟಡ, ಮೂಲಭೂತ ಸೌಕರ್ಯಗಳಿಲ್ಲವೆಂದು ಹೇಳಿದ್ದಾರೆ. ಶಿವಮೊಗ್ಗದ ಮತ್ತು ಹಾಸನದ ಈ ಕಾಲೇಜ್‌ಗಳು 2007 ರಲ್ಲಿ ಪ್ರಾರಂಭವಾಗಿವೆ. ರಾಜ್ಯದಲ್ಲಿ ಈಗ ಬೀದರ್‌ನಲ್ಲಿ ಒಂದು ಮತ್ತು ಬೆಂಗಳೂರಿನಲ್ಲಿ ಒಂದು ಪಶುವೈದ್ಯಕೀಯ ಕಾಲೇಜಿದೆ. ಹಾಸನ